# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
# ರಾಜ್ಯದ ದೂರಶಿಕ್ಷಣದ ಏಕೈಕ ವಿಶ್ವವಿದ್ಯಾನಿಲಯ
## ಮುಕ್ತಗಂಗೋತ್ರಿ, ಮೈಸೂರು–570006



## *ಸ್ನಾತಕ ಹಾಗೂ ಸ್ನಾತಕೋತ್ತರ ಸಮಾಜಕಾರ್ಯ*
## *(ಬಿ.ಎಸ್.ಡಬ್ಲೂ ಮತ್ತು ಎಂ.ಎಸ್.ಡಬ್ಲೂ)*
## *ಕೋರ್ಸ್‌ನ ಪಕ್ಷಿನೋಟ*

**ಡಾ. ಬಿ.ಎಸ್. ಗುಂಜಾಳ್**
ಪ್ರಾಧ್ಯಾಪಕರು
ಸಮಾಜಕಾರ್ಯ ಅಧ್ಯಯನ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ
ಮೈಸೂರು–570006

ಇತ್ತೀಚಿನ ಉದ್ಯೋಗ ಮಾರುಕಟ್ಟೆಯಲ್ಲಿ ಹಾಗೂ ಸ್ವಂತ ವೃತ್ತಿ ಆಯ್ಕೆ ಪರಿಗಣನೆಯಲ್ಲಿ ವಿಶೇಷವಾಗಿ ಕಲಾನಿಕಾಯದ ಸಮಾಜಕಾರ್ಯ (ಬಿ.ಎಸ್.ಡಬ್ಲ್ಯೂ ಹಾಗೂ ಎಂ.ಎಸ್.ಡಬ್ಲ್ಯೂ) ಪದವೀಧರರಿಗೆ ಹೆಚ್ಚಿನ ಪ್ರಾಶಸ್ತ್ಯ ದೊರಕುತ್ತಿರುವುದು ಹಾಗೂ ಈ ಪದವಿಗಳನ್ನು ಪಡೆದ ಅಭ್ಯರ್ಥಿಗಳು ವೃತ್ತಿ ಬದುಕಿನಲ್ಲಿ ನೆಲೆ ಕಂಡುಕೊಳ್ಳುತ್ತಿರುವುದು ನಮಗೆಲ್ಲರಿಗೂ ಗೊತ್ತಿರುವ ಸಂಗತಿಯಾಗಿರುತ್ತದೆ. ಸಮಾಜಕಾರ್ಯ ಶಿಕ್ಷಣವು ವೃತಿಯಾಧಾರಿತ ಕೋರ್ಸ್ ಆಗಿದ್ದು, ಹಿಂದಿನಿಂದಲೂ ಬಹು ಬೇಡಿಕೆಯ ವಿಷಯವಾಗಿರುತ್ತದೆ. ಇದರಲ್ಲಿ ಮೂರು ವರ್ಷದ ಆರು ಸೆಮಿಸ್ಟರ್ ಒಳಗೊಂಡ ಸ್ನಾತಕ ಪದವಿ ಸಮಾಜಕಾರ್ಯ (ಬಿ.ಎಸ್.ಡಬ್ಲ್ಯೂ)

ಹಾಗೂ ಎರಡು ವರ್ಷದ ನಾಲ್ಕು ಸೆಮಿಸ್ಟರ್ ಒಳಗೊಂಡ ಸ್ನಾತಕೋತ್ತರ ಸಮಾಜಕಾರ್ಯ ಪದವಿ (ಎಂ.ಎಸ್.ಡಬ್ಲ್ಯೂ) ಎರಡು ರೀತಿಯ ಪದವಿಗಳು ಅವಕಾಶವಿರುತ್ತದೆ. ಸೈದ್ಧಾಂತಿಕ ಕಲಿಕೆಯಲ್ಲಿ ವಿದ್ಯಾರ್ಥಿಗಳು ಸಮಾಜಕಾರ್ಯ ವಿಷಯದ ಆರು ವಿಧಾನಗಳಾದ ವ್ಯಕ್ತಿಗತ ಸಮಾಜಕಾರ್ಯ, ವೃಂದಗತ ಸಮಾಜಕಾರ್ಯ, ಸಮುದಾಯ ಸಂಘಟನೆ, ಸಮಾಜಕಾರ್ಯ ಸಂಶೋಧನೆ, ಸಮಾಜ ಕಲ್ಯಾಣ ಆಡಳಿತ, ಹಾಗೂ ಸಾಮಾಜಿಕ ಕ್ರಿಯೆ ಇವುಗಳೊಂದಿಗೆ ಸಮಾಜಕಾರ್ಯದ ಪರಿಚಯ ಮತ್ತು ಉಗಮ, ಗ್ರಾಮೀಣ, ನಗರ, ಮತ್ತು ಬುಡಕಟ್ಟು ಸಮುದಾಯ ಅಭಿವೃದ್ಧಿ, ಕುಟುಂಬ, ಮಹಿಳೆ ಮತ್ತು ಮಕ್ಕಳ ಕೇಂದ್ರಿತ ಸಮಾಜಕಾರ್ಯ, ಅಂಗವಿಕಲರು ಮತ್ತು ವೃದ್ಧರ ಕೇಂದ್ರಿತ ಸಮಾಜಕಾರ್ಯ, ಅಪರಾಧಶಾಸ್ತ್ರ ಸಮಾಜಕಾರ್ಯ, ಶಾಲಾ ಸಮಾಜಕಾರ್ಯ, ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಅಭಿವೃದ್ಧಿ, ಕೈಗಾರಿಕಾ ಸಂಬಂಧಗಳು, ಕಾರ್ಮಿಕ ಕಾನೂನು ಮತ್ತು ಕಾರ್ಮಿಕರ ಕಲ್ಯಾಣ, ಸಾಂಸ್ಥಿಕ ವರ್ತನೆ ಮತ್ತು ಸಾಂಸ್ಥಿಕ ಅಭಿವೃದ್ಧಿ, ಸಾರ್ವಜನಿಕ ಆರೋಗ್ಯ, ಸಮುದಾಯ ಮತ್ತು ಮಾನಸಿಕ ಆರೋಗ್ಯ, ವಿಪತ್ತು ನಿರ್ವಹಣೆ, ಮನೋ-ವೈದ್ಯಕೀಯ ಸಮಾಜಕಾರ್ಯ, ಹಾಗೂ ಜೀವನೋಪಾಯ ಮತ್ತು ಸಾಮಾಜಿಕ ಉದ್ದಿಮೆಗಳು ಹೀಗೆ ಹಲವು ಸಮಾಜದ ಉಪಯುಕ್ತ ವಿಷಯದ ಕಲಿಕೆಗೆ ಒಳಪಡುತ್ತಾರೆ. ಸೈದ್ಧಾಂತಿಕ ಪಠ್ಯಕ್ರಮಗಳೊಂದಿಕೆ ಈ ಕೋರ್ಸ್‌ಗಳ ಅತ್ಯಮೂಲ್ಯ ಕಲಿಕಾ ಭಾಗವಾದ ಪ್ರಾಯೋಗಿಕ ಪಠ್ಯಕ್ರಮದಲ್ಲಿ ಕ್ಷೇತ್ರ ಭೇಟಿ, ಪೂರ್ವಭಾವಿ ಭೇಟಿ, ಸಮಾಜಕಾರ್ಯ ಗ್ರಾಮೀಣ ಶಿಬಿರ, ಬೇಸಿಗೆ ಕಲಿಕಾ ನಿಯೋಜನೆ, ಯೋಜನೆ, ಹಾಗೂ ಬ್ಲಾಕ್ ಪ್ಲೇಸ್‌ಮೇಂಟ್ ಇನ್ನೀತರೆ ಹಲವು ಕಲಿಕಾ ಅಂಶಗಳನ್ನು ಒಳಗೊಂಡಿದ್ದು, ಸಂಪೂರ್ಣ ವೃತ್ತಿಯಾಧಾರಿತ ಕೌಶಲ್ಯಗಳನ್ನು ಭೋದಿಸುವ ವಿಷಯವಾಗಿರುತ್ತದೆ. ವ್ಯಾಸಂಗದ ಅವಧಿಯಲ್ಲಿ ಈ ಮೇಲ್ಕಂಡ ಪ್ರಾಯೋಗಿಕ ಅಂಶಗಳ ಕಲಿಕೆಗೆ, ಸರ್ಕಾರಿ ಮತ್ತು ಅರೆ ಸರ್ಕಾರಿ ಸಂಸ್ಥೆಗಳು/ಇಲಾಖೆಗಳಿಗೆ, ಕೈಗಾರಿಕೆಗಳಿಗೆ, ಸರ್ಕಾರೇತರ ಸಂಸ್ಥೆಗಳಿಗೆ, ಆಸ್ಪತ್ರೆಗಳಿಗೆ, ಹಾಗೂ ನಿಗಮ-ಮಂಡಳಿಗಳಿಗೆ ಭೇಟಿ ನೀಡುವುದರಿಂದ ಇವುಗಳಲ್ಲಿ ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮಗಳು, ಯೋಜನೆಗಳು, ಸಿಬ್ಬಂದಿ ಕಾರ್ಯ-ವೈಖರಿಗಳನ್ನು ಮತ್ತು ದಾಖಲಾತಿ ನಿರ್ವಹಣೆಗಳನ್ನು ವಿದ್ಯಾರ್ಥಿ ದೆಸೆಯಲ್ಲಿಯೇ ನೇರವಾಗಿ ಕಲಿಯುವುದರಿಂದ ತಮ್ಮ ಭವಿಷ್ಯದ ವೃತ್ತಿಯನ್ನು ಕೈಗೊಳ್ಳುವ ಸಲುವಾಗಿ ವೃತ್ತಿ ಬದುಕಿಗೆ ಅವಶ್ಯಕವಿರುವ ಎಲ್ಲಾ ರೀತಿಯ ಕೌಶಲ್ಯಗಳು, ಸಂಘಟನಾ ಸಾಮರ್ಥ್ಯ, ಸಂಶೋಧನಾ ಜ್ಞಾನ ಮತ್ತು ದಾಖಲೀಸುವಿಕೆಯ ಕಲೆ ಬೆಳೆಸಿಕೊಳ್ಳುವುದರಿಂದ ತಮ್ಮ ಆಯ್ಕೆಯ ವೃತ್ತಿಗೆ ಬಹುಬೇಗನೇ ಸೇರಿಕೊಳ್ಳಲು ನೆರವಾಗುತ್ತದೆ.

ಸಮಾಜಕಾರ್ಯ (ಬಿ.ಎಸ್.ಡಬ್ಲ್ಯೂ ಹಾಗೂ ಎಂ.ಎಸ್.ಡಬ್ಲ್ಯೂ) ಪದವಿಯನ್ನು ಪಡೆದ ನಂತರ ಸರ್ಕಾರಿ ಇಲಾಖೆಗಳಾದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ, ಜಿಲ್ಲಾ ಅಂಗವಿಕಲರ ಮತ್ತು ಹಿರಿಯ  ನಾಗರೀಕರ ಸಬಲೀಕರಣ ಇಲಾಗೆ, ಸಾರಿಗೆ ಇಲಾಖೆ, ಸ್ಥಳೀಯ ಆಡಳಿತ ಮತ್ತು ಪೌರಾಡಳಿತ ಇಲಾಖೆ, ಪಂಚಾಯತ್ ರಾಜ್ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆ, ಶಿಕ್ಷಣ ಇಲಾಖೆ, ಕಾರ್ಮಿಕ ಇಲಾಖೆ, ಕಾಲೇಜು ಶಿಕ್ಷಣ ಇಲಾಖೆ ಮತ್ತು ಉನ್ನತ ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಸರ್ಕಾರಿ ಸ್ವಾಮ್ಯದ ಕೈಗಾರಿಕೆ, ಬ್ಯಾಂಕ್ ಕ್ಷೇತ್ರ ಮತ್ತಿತರ ಕಡೇ ಖಾಯಂ ಮತ್ತು ಗುತ್ತಿಗೆ ಆಧಾರಿತ ಉದ್ಯೋಗದ ಅವಕಾಶಗಳಿವೆ.

ಮೇಲ್ಕಂಡ ಅವಕಾಶಗಳ ಹೊರತಾಗಿ ಎನ್.ಜಿ.ಒ ಗಳಲ್ಲಿ, ರೈಲ್ವೆ ಇಲಾಖೆ, ಮೆಟ್ರೋ, ಕೇಂದ್ರ ಮತ್ತು ಸರ್ಕಾರಿ ಪ್ರಾಯೋಜಿತ ಯೋಜನೆಗಳಲ್ಲಿ, ಖಾಸಗೀ ಶೈಕ್ಷಣಿಕ ಸಂಸ್ಥೆಗಳಲ್ಲಿ, ಕಂಪನಿಗಳಲ್ಲಿ, ಗಾರ್ಮೆಂಟ್ಸ್‌ಗಳಲ್ಲಿ, ರಿಟೈಲ್ ಇಂಡಸ್ಟ್ರಿಗಳಲ್ಲಿ, ಬ್ಯಾಂಕ್‌ಗಳಲ್ಲಿ ಮತ್ತು ಪುನರ್ವಸತಿ ಕೇಂದ್ರಗಳಲ್ಲಿ ಹಲವಾರು ಉದ್ಯೋಗಗಳನ್ನು ಪಡೆಯಬಹುದಾಗಿದೆ. ಇದಲ್ಲದೇ ಸ್ವಯಂ ವೃತ್ತಿಯಡಿಯಲ್ಲಿಯೂ ಸ್ವತಃ ತಾವೇ ಎನ್.ಜಿ.ಒ, ಟ್ರಸ್ಟ್, ಕನ್ಸಲ್ಟೆನ್ಸಿಗಳು, ಮಾನವ ಸಂಪನ್ಮೂಲ ಏಜೆನ್ಸಿಗಳು, ಸಂಶೋಧನಾ ಸಂಸ್ಥೆಗಳು ಇನ್ನಿತರೇ ಸಂಸ್ಥೆಗಳನ್ನು ಮುನ್ನಡೆಸಲು ಅವಕಾಶಗಳಿರುತ್ತದೆ. ಇವೆಲ್ಲವನ್ನೂ ಕ್ರೋಢೀಕರಿಸಿದರೆ ಸಮಾಜಕಾರ್ಯ ಪದವೀಧರರು ಉಪನ್ಯಾಸಕರಾಗಿ, ಸಹಾಯಕ ಪ್ರಾಧ್ಯಾಪಕರಾಗಿ, ಸಹ ಪ್ರಾಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ಸಮಾಜಕಾರ್ಯಕರ್ತರಾಗಿ, ಆಪ್ತ ಸಮಾಲೋಚಕರಾಗಿ, ಮನೋ-ವೈದ್ಯಕೀಯ ಸಮಾಜಕಾರ್ಯಕರ್ತರಾಗಿ, ಮಾನವ ಸಂಪನ್ಮೂಲ ವ್ಯವಸ್ಥಾಪಕರಾಗಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾಗಿ, ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾಗಿ, ಮೇಲ್ವಿಚಾರಕರಾಗಿ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಯಾಗಿ, ತರಬೇತಿ ಅಧಿಕಾರಿಗಳಾಗಿ, ಸಮುದಾಯ ಸಂಘಟಕರಾಗಿ, ಯೋಜನಾ/ಕಾರ್ಯಕ್ರಮ ಸಂಯೋಜಕರಾಗಿ ಸ್ವಯಂ ವೃತ್ತಿಪರರಾಗಿ ಉದ್ಯೋಗ ಹೊಂದಲು ಹತ್ತು ಹಲವು ವೃತ್ತಿ ಅವಕಾಶಗಳಿವೆ. ಸಮಾಜಕಾರ್ಯ ಪಧವೀಧರರಿಗೆ ರಾಜ್ಯ ಮತ್ತು ದೇಶದಲ್ಲಿ ಮಾತ್ರವಲ್ಲದೇ ವಿದೇಶಗಳಲ್ಲಿಯೂ ಕೂಡ ವಿಫುಲ ಅವಕಾಶಗಳಿವೆ. ದೇಶದಲ್ಲಿ 1936ರಲ್ಲಿ ಮುಂಬೈನ ಟಾಟಾ ಇನ್ಸ್ಟ್ಯೂಟ್ ಆಫ್ ಸೋಶಿಯಲ್ ಸೈನ್ಸಸ್‌ನಲ್ಲಿ ಪ್ರಾರಂಭವಾದ ಸಮಾಜಕಾರ್ಯ ವಿಷಯವು ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿ ಪೂರ್ಣಕಾಲಿಕ ಮಾದರಿಯಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ-ಧಾರವಾಡ, ಮೈಸೂರು ವಿಶ್ವವಿದ್ಯಾನಿಲಯ,-ಮೈಸೂರು, ಕುವೆಂಪು ವಿಶ್ವವಿದ್ಯಾನಿಲಯ-ಶಿವಮೊಗ್ಗ, ರಾಣಿಚನ್ನಮ್ಮ ವಿಶ್ವವಿದ್ಯಾನಿಲಯ-ಬೆಳಗಾವಿ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ-

ವಿಜಯಪುರ, ಮಂಗಳೂರು ವಿಶ್ವವಿದ್ಯಾನಿಲಯ–ಮಂಗಳೂರು, ಬೆಂಗಳೂರಿನಲ್ಲಿರುವ ಬೆಂಗಳೂರು ವಿಶ್ವವಿದ್ಯಾನಿಲಯ (ಜ್ಞಾನಭಾರತೀ ಕ್ಯಾಂಪಸ್), ಬೆಂಗಳೂರು ನಗರ ವಿಶ್ವವಿದ್ಯಾನಿಲಯ(ಸೆಂಟ್ರಲ್ ಕಾಲೇಜು ಕ್ಯಾಂಪಸ್), ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯ, ತುಮಕೂರು ವಿಶ್ವವಿದ್ಯಾನಿಲಯ–ತುಮಕೂರು, ದಾವಣಗೆರೆ ವಿಶ್ವವಿದ್ಯಾನಿಲಯ–ದಾವಣಗೆರೆ ರಾಯಚೂರು ವಿಶ್ವವಿದ್ಯಾನಿಲಯ–ರಾಯಚೂರು, ಕೇಂದ್ರೀಯ ವಿಶ್ವವಿದ್ಯಾನಿಲಯ, ಕಡಗಂಚಿ, ಕಲಬುರುಗಿ, ಮತ್ತು ಗುಲ್ಬರ್ಗ ವಿಶ್ವವಿದ್ಯಾನಿಲಯ–ಕಲಬುರುಗಿ, ಇವುಗಳಲ್ಲಿ ಸಮಾಜಕಾರ್ಯ ಕೋರ್ಸ್ ಲಭ್ಯವಿರುವುದಲ್ಲದೇ, ಇವುಗಳಲ್ಲಿನ ಕೆಲವು ವಿಶ್ವವಿದ್ಯಾಲಯಗಳ ಸಂಯೋಜನೆಯೊಂದಿಗೆ ಖಾಸಗೀ ಕಾಲೇಜುಗಳಲ್ಲಿಯು ಕೂಡ ಕೋರ್ಸ್ ಲಭ್ಯವಿರುತ್ತದೆ. ಅದಲ್ಲದೇ ರಾಜ್ಯದಲ್ಲಿನ ಕೆಲವು ಖಾಸಗೀ/ಡೀಮ್ಡ್ ವಿಶ್ವವಿದ್ಯಾಲಯಗಳಲ್ಲೂ ಸಮಾಜಕಾರ್ಯ ಕೋರ್ಸ್ ಲಭ್ಯವಿರುತ್ತದೆ. ಇವೆಲ್ಲದರಲ್ಲಿ ವಿದ್ಯಾಭ್ಯಾಸ ಪಡೆದ ಪದವೀಧರರು, ಈಗ ಹಲವಾರು ಕ್ಷೇತ್ರಗಳಲ್ಲಿ ತಮ್ಮ ವೃತ್ತಿ ನೆಲೆಯನ್ನು ಹೊಂದಿದ್ದಾರೆ. ಅದ್ಯಾಗೂ ಹಲವಾರು ವ್ಯಕ್ತಿಗಳು ಈ ಒಂದು ಪದವಿಗಳನ್ನು ಪೂರ್ಣಕಾಲಿಕವಾಗಿ ಅಭ್ಯಸಿಸುವ ತೊಡಕಿನಿಂದಾಗಿ ಹಾಗೂ ಇದುವರೆವಿಗೂ ನಮ್ಮ ರಾಜ್ಯದಲ್ಲಿ ಸಮಾಜಕಾರ್ಯ ಪದವಿಯು ದೂರಶಿಕ್ಷಣ ಮಾದರಿಯಲ್ಲಿ ಲಭ್ಯವಿಲ್ಲದಿದ್ದರಿಂದ ಈ ಪದವಿಯಿಂದ ವಂಚಿತರಾಗಿದ್ದಾರೆ. ಜೊತೆಗೆ ಈ ಪದವಿಗಳನ್ನು ಬೋಧಿಸುವ ವಿಶ್ವವಿದ್ಯಾನಿಲಯಗಳು/ಕಾಲೇಜುಗಳು ನಗರ ಪ್ರದೇಶದಲ್ಲಿರುವುದರಿಂದ ವಿಶೇಷವಾಗಿ ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳು ಈ ಪದವಿಯನ್ನು ಅಭ್ಯಸಿಸಲು ನಗರ ಪ್ರದೇಶವನ್ನೇ ಅವಲಂಬಿಸಬೇಕಿರುತ್ತದೆ.

ಈ ಹಿನ್ನೆಲೆಯಲ್ಲಿ ಗ್ರಾಮೀಣ ಭಾಗದಲ್ಲಿನ ಅಭ್ಯರ್ಥಿಗಳು, ಈಗಾಗಲೇ ವೃತ್ತಿಯಲ್ಲಿರುವವರು ತಮ್ಮ ಉನ್ನತ ವಿದ್ಯಾಭ್ಯಾಸ ಪಡೆಯಲಿಚ್ಛಿಸುವವರು, ಪೂರ್ಣಕಾಲಿಕ ಅಭ್ಯಾಸದ ಉನ್ನತ ಶಿಕ್ಷಣದಿಂದ ವಂಚಿತರಾದವರು, ವಿವಾಹಿತರು, ಇನ್ನಿತರರಿಗೆ ಅನುಕೂಲವಾಗಲೆಂದು ಮಾನ್ಯ ಗೌರವಾನ್ವಿತ ಕುಲಪತಿಗಳಾದ ಪ್ರೊ. ಶರಣಪ್ಪ ವಿ. ಹಲಸೇರವರ ಇಚ್ಛಾಸಕ್ತಿ ಹಾಗೂ ಆಶಯದೊಂದಿಗೆ ಈ ಒಂದು ವಿಶ್ವವಿದ್ಯಾನಿಲಯದಲ್ಲಿ ಯು.ಜಿ.ಸಿ.ಯಿಂದ ಮಾನ್ಯತೆ ಪಡೆದು ದೂರ ಶಿಕಣ ಮಾದರಿಯಲ್ಲಿ 2023–24ನೇ ಶೈಕ್ಷಣಿಕ ಸಾಲಿನಿಂದ ಸಮಾಜಕಾರ್ಯ ಪದವಿಗಳನ್ನು ಪ್ರಾರಂಭಿಸಲಾಗಿದ್ದು, ಸದರಿ ವರ್ಷದಲ್ಲಿ 250ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರವೇಶಾತಿ ಪಡೆದು ವಿದ್ಯಾಭ್ಯಾಸ ನಡೆಸುತ್ತಿದ್ದಾರೆ. ವಿಶ್ವವಿದ್ಯಾನಿಲಯದ ಸಮಾಜಕಾರ್ಯ ಅಧ್ಯಯನ ವಿಭಾಗದಿಂದ ಈಗಾಗಲೇ ಸ್ವ–ಕಲಿಕಾ ಸಾಮಗ್ರಿಗಳನ್ನು ದೇಶದ ವಿವಿಧ ವಿಶ್ವವಿದ್ಯಾನಿಲಯಗಳ ನುರಿತ ಪ್ರಾಧ್ಯಾಪಕರುಗಳಿಂದ ರಚಿಸಲಾಗಿದ್ದಲ್ಲದೇ, ಸಂಪರ್ಕ ತರಗತಿಗಳನ್ನೂ ಕೂಡ

ಅನುಭವಿ ಪ್ರಾಧ್ಯಾಪಕರುಗಳಿಂದ ನಡೆಸಲಾಗುತ್ತಿದೆ. ಈ ಒಂದು ವಿಶ್ವವಿದ್ಯಾಲಯದಲ್ಲಿ ಸಮಾಜಕಾರ್ಯ ಪದವಿ ಕಲಿಕೆಗೆ ಎಲ್ಲಾ ರೀತೀಯ ಸಮರ್ಪಕ ಮೂಲಭೂತ ಸೌಕರ್ಯಗಳು, ನುರಿತ ಅದ್ಯಾಪಕರುಗಳು, ಕಲಿಕಾ ಸಾಮಗ್ರಿಗಳ ಸೌಲಭ್ಯವಿರುತ್ತದೆ. ಸದರಿ ಬಿ.ಎಸ್.ಡಬ್ಲ್ಯೂ ಹಾಗೂ ಎಂ.ಎಸ್.ಡಬ್ಲ್ಯೂ ಪದವಿಗಳನ್ನು ಪ್ರಾರಂಭಿಸಿ ಒಂದು ವರ್ಷಪೂರ್ಣಗೊಳ್ಳುವುದಕ್ಕಿಂತ ಮುಂಚೆಯೇ ಕೆ.ಎಸ್.ಓ.ಯುನ ಸಮಾಜಕಾರ್ಯ ಅಧ್ಯಯನ ವಿಭಾಗದಿಂದ ಮೂರು ದಿನಗಳ "Indian Society of Professional Social Work (ISPSW)ನ (NIMHANS ಬೆಂಗಳೂರು) ವಾರ್ಷಿಕ ರಾಷ್ಟ್ರೀಯ ಸಮ್ಮೇಳನ"ವನ್ನು "New Vistas in Social Work: Navigating the Changing Landscape in Education, Research, and Practice" ಶೀರ್ಷಿಕೆಯಡಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಮತ್ತು ಭಾರತೀಯ ವೃತ್ತಿಪರರ ಸಮಾಜಕಾರ್ಯಕರ್ತರ ಸಂಘಟನೆ (ಐ.ಎಸ್.ಪಿ.ಎಸ್.ಡಬ್ಲ್ಯೂ) ಇವರುಗಳ ಜಂಟಿ ಸಹಯೋಗದಲ್ಲಿ ಕೆ.ಎಸ್.ಓ.ಯುನಲ್ಲಿ ಕಳೆದ ಮೇ 16, 17 ಮತ್ತು 18, 2024ರಲ್ಲಿ ಆಯೋಜಿಸಲಾಗಿದ್ದು, ಈ ಸಮ್ಮೇಳನದಲ್ಲಿ ದೇಶದ ವಿವಿಧ ವಿಶ್ವವಿದ್ಯಾನಿಲಯಗಳಿಂದ ಪ್ರಾಧ್ಯಾಪಕರುಗಳು, ಸಂಶೋಧನಾರ್ಥಿಗಳು, ವಿಶೇಷ ಸಂಪನ್ಮೂಲ ವ್ಯಕ್ತಿಗಳು, ಸಮಾಜಕಾರ್ಯ ವೃತ್ತಿ ಆಚರಣೆಯಲ್ಲಿರುವವರು ಹಾಗೂ ವಿದ್ಯಾರ್ಥಿಗಳು ಸೇರಿದಂತೆ 1400ಕ್ಕೂ ಅಧಿಕ ಪ್ರತಿನಿಧಿಗಳು ಭಾಗವಹಿಸಿದ್ದು, ಸಮ್ಮೇಳನವು ಸಮಾಜಕಾರ್ಯ ಕ್ಷೇತ್ರದಲ್ಲಿ ಹಾಗೂ ಕೆ.ಎಸ್,ಓ.ಯು ವಿಶ್ವವಿದ್ಯಾನಿಲಯದಲ್ಲಿ ಒಂದು ದಾಖಲೆಯ ಮೈಲಿಗಲ್ಲಾಗಿದೆ.




**ಸಮಾಜಕಾರ್ಯ ರಾಷ್ಟ್ರೀಯ ಸಮ್ಮೇಳನ**
**ಮೇ 16, 17 ಮತ್ತು 18, 2024**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ತನ್ನ ಪ್ರಾದೇಶಿಕ ಕೇಂದ್ರದ ಶಾಖೆಗಳನ್ನು ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲಿಯು ಹೊಂದಿದ್ದು, ಆಯಾ ಪ್ರಾದೇಶಿಕ ಕೇಂದ್ರಗಳ ವ್ಯಾಪ್ತಿಯಲ್ಲಿ ಅಧ್ಯಯನ ಕೇಂದ್ರಗಳನ್ನು ಹೊಂದಿರುತ್ತದೆ, ಇದರಿಂದ ಆಯಾಯ ಜಿಲ್ಲೆಯ ಅಭ್ಯರ್ಥಿಗಳಿಗೆ ಸ್ಥಳೀಯವಾಗಿ ಈ ಕೋರ್ಸ್ ವ್ಯಾಸಂಗ ಮಾಡಲು ಹೆಚ್ಚಿನ ಅನುಕೂಲವಾಗುತ್ತದೆ. ಪ್ರವೇಶಾತಿ ಪಡೆದ ಅಭ್ಯರ್ಥಿಗಳು ಕೇವಲ ಪ್ರಾಯೋಗಿಕ ಮೌಖಿಕ ಪರೀಕ್ಷೆಗೆ ಮಾತ್ರ ಮೈಸೂರಿನ ಕೇಂದ್ರಸ್ಥಳಕ್ಕೆ ಹಾಜರಾಗಬೇಕಿದ್ದು, ಉಳಿದ ಎಲ್ಲಾ ಪರೀಕ್ಷೆ ಮತ್ತು ಇತರೆ ಶೈಕ್ಷಣಿಕ ಅಂಶಗಳನ್ನು ತಮ್ಮ ಸ್ಥಳೀಯ ಕೇಂದ್ರಗಳಲ್ಲಿಯೇ ಪೂರೈಸಿಕೊಳ್ಳಲು ಉತ್ತಮ ಸದಾವಕಾಶವಿರುತ್ತದೆ.

ಈ ಪದವಿ ಪ್ರವೇಶಾತಿಗಾಗಿ ಪ್ರತೀ ವರ್ಷ ಎರಡು ಸಲ ಅಂದರೆ, ಜನವರಿ ಹಾಗೂ ಜುಲೈ ತಿಂಗಳಿನಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗುತ್ತಿದ್ದು, ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿಯೇ ಅರ್ಜಿಯನ್ನು ಸಲ್ಲಿಸಲು ಅವಕಾಶವಿರುತ್ತದೆ. ಮೂರು ವರ್ಷದ ಸ್ನಾತಕ ಸಮಾಜಕಾರ್ಯ ಪದವಿಗೆ (ಬಿ.ಎಸ್.ಡಬ್ಲ್ಯೂ) ಕರ್ನಾಟಕ ರಾಜ್ಯದ ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಮಾನ್ಯತೆ ಹೊಂದಿದ ಪಿ.ಯು.ಸಿಯಲ್ಲಿ ಉತ್ತೀರ್ಣರಾಗಿರಬೇಕು ಹಾಗೂ ಎರಡು ವರ್ಷದ ಸ್ನಾತಕೋತ್ತರ ಸಮಾಜಕಾರ್ಯ ಪದವಿಗೆ (ಎಂ.ಎಸ್.ಡಬ್ಲ್ಯೂ) ದೇಶದ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಯಾವುದೇ ಪದವಿಯನ್ನು ಪಡೆದ ಆಸಕ್ತ ಅಭ್ಯರ್ಥಿಗಳು ಈ ಸದಾವಕಾಶವನ್ನು ಉಪಯೋಗಪಡಿಸಿಕೊಳ್ಳಬಹುದಾಗಿದೆ.